

■ ಎನ್.ಜಿ. ತಿಪ್ಪೇಸ್ವಾಮಿ

# ದೇವರ ಮರ

ಒಂದಾನೊಂದು ಕಾಲದಲ್ಲಿ ಹಿಮಾಲಯದ ತಪ್ಪಲಿನ ಪರ್ವತ ಪ್ರದೇಶದಲ್ಲಿ ಹಿಮವಂತನೆಂಬ ರಾಜ, ರಾಜ್ಯಭಾರ ಮಾಡುತ್ತಿದ್ದನು. ರಾಜನಿಗೊಂದು ಮಹದಾಸೆ, ತಾನೊಂದು ಭಿನ್ನವಾದ ಸುಂದರವಾದ ಈ ಹಿಂದೆ ಯಾರು ಕಟ್ಟಿರದ, ನೋಡಿರದ ಅರಮನೆಯನ್ನು ಕಟ್ಟಬೇಕು, ಹಾಗೂ ಇಡೀ ಅರಮನೆಯು ಕೇವಲ ಒಂದೇ ಒಂದು ಮರದ, ಕಂಬದ ಮೇಲೆ ನಿರ್ಮಾಣ ಮಾಡಬೇಕೆಂಬುದು ರಾಜನ ನಿರ್ಧಾರವಾಗಿತ್ತು. ಆತನ ಸಾಮ್ರಾಜ್ಯದಲ್ಲಿ ಎತ್ತರವಾದ, ಬಲಿಷ್ಠವಾದ, ಸಾಕಷ್ಟು ಮರಗಳಿದ್ದವು, ಅವುಗಳಲ್ಲಿ ದೇವರ ಮರಗಳು ಸಹ ಇದ್ದವು.

ರಾಜ ತನ್ನ ಆಳುಗಳನ್ನು ಕರೆದು ಸಾಮ್ರಾಜ್ಯದಲ್ಲಿ ಎತ್ತರವಾದ, ಬಲಿಷ್ಠವಾದ ಮರವನ್ನು ಹುಡುಕಿ ತರುವಂತೆ ತಿಳಿಸಿದನು. ರಾಜನ ಆಳುಗಳು ಸುಮಾರು ದಿನಗಳವರೆಗೆ ಹುಡುಕಿ ಮಹಾರಾಜರೇ, ಅರಣ್ಯದಲ್ಲಿ ಸಾಕಷ್ಟು ಮರಗಳಿವೆ, ಅವುಗಳಲ್ಲಿ ದೇವರ ಮರಗಳು ತುಂಬಾ ಎತ್ತರವಾಗಿ ಬಲಿಷ್ಟವಾಗಿವೆ ಎಂದರು.

ತಕ್ಷಣ ರಾಜನ ಮಗಳು ದೇವರ ಮರಗಳ ಬಳಕೆಗೆ ವಿರೋಧ ವ್ಯಕ್ತಪಡಿಸಿದಳು. ಕಾರಣ ಆ ಮರಗಳನ್ನು ಕೇವಲ ದೇವಾಲಯಗಳ ನಿರ್ಮಾಣಕ್ಕಷ್ಟೆ ಬಳಕೆ ಮಾಡುವುದು ಎಂದಾಕ್ಷಣ ರಾಜನು ಸಿಟ್ಟಿನಿಂದ ನನ್ನ ಅರಮನೆಯು ಯಾವ ದೇವಾಲಯಕ್ಕಿಂತ ಕಡಿಮೆ ಇಲ್ಲ. ಎಂದು ಆಳುಗಳಿಗೆ ಆಜ್ಞಾಪಿಸಿದನು. ಮರವನ್ನು ತರಲು ಹೋದವರು ಬಹು ಬೇಗನೆ ಹಿಂತಿರುಗಿ ಬಂದು, ಪರ್ವತ ಪ್ರದೇಶವಾದ್ದರಿಂದ ಮರವನ್ನು ತರಲು ತುಂಬಾ ತೊಂದರೆಯಾಗುತ್ತದೆ. ಎಂಬ ಉತ್ತರವನ್ನಿತ್ತರು.

ಮಹಾರಾಜ ತನ್ನ ಮಗನನ್ನು ಕರೆದು ಕುದುರೆ ಸವಾರರ ಸಹಾಯದಿಂದ ತರಲು ತಿಳಿಸಿದನು. ಕೆಲವೇ ದಿನಗಳ ನಂತರ ಮಗನೂ ವಾಪಾಸಾಗಿ, ಮರವನ್ನು ಒಂದು ಇಂಚು ಸಹ ಅಲುಗಾಡಿಸಲು ಆಗಲಿಲ್ಲ. ಎತ್ತು, ಆನೆಗಳಿಂದ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ ಎಂದನು. ಮಹಾರಾಜನಿಗೆ ಕೋಪ ಉಕ್ಕಿ ಬಂದು ಎಲ್ಲಿಯಾದರೂ ಸರಿಯೇ, ವಾರದೊಳಗಾಗಿ ಮರವನ್ನು ತರಲೆಬೇಕೆಂದು ಆಜ್ಞೆ ಇತ್ತನು.

ರಾಜನ ಆಳುಗಳು ಸಾಮ್ರಾಜ್ಯದಾದ್ಯಂತ ಹುಡುಕಿ ಬಳಲಿ, ಬೆಂಡಾಗಿ ಕೊನೆಗೆ ಸಾಮ್ರಾಜ್ಯದ ಉದ್ಯಾನವನದಲ್ಲಿ ಬಹು ದೊಡ್ಡ ಮರ ಇರುವುದನ್ನು ಪತ್ತೆ ಹಚ್ಚಿದರು. ಆದರೆ ಆ ಮರವನ್ನು ಸುತ್ತಮುತ್ತಲ ಹಳ್ಳಿಯ ಜನ ಪೂಜಿಸುತ್ತಿದ್ದರು. ಕಾರಣ ಅದರಲ್ಲಿ ದೇವತೆ ವಾಸವಿದ್ದಾಳೆ, ಅಲ್ಲದೆ ಅದಕ್ಕೆ ಅಗಾಧ ಶಕ್ತಿ, ಸೌಂದರ್ಯವನ್ನು ದೇವತೆ ನೀಡಿದ್ದಾಳೆ ಎಂದು ನಂಬಿದ್ದರು. ಮರುದಿನ ಮಂತ್ರಿಗಳು, ರಾಜನ ಆಳುಗಳು ದೇವರ ಮರದ ಬಳಿಗೆ ಗೌರವ ಸೂಚಕವಾಗಿ ದೀಪಗಳನ್ನು, ಹೂವಿನ ಹಾರಗಳನ್ನು ಹಿಡಿದು ಸಂಗೀತ ವಾದ್ಯಗಳೊಂದಿಗೆ